I am producing the death certificate of my husband Ramakrishna who died on 08.10.2022 and it is marked as **Ex.P.7**.

I am producing the digital copy of gift deed executed by Smt. Lakshmamma in favor of Rashmidevi.V pertaining to Anjanapura Layout, 9th Block, site No.5 and it is marked as **Ex.P.8**.

I am producing the digital copy of gift deed executed by Smt. Lakshmamma in favor of Rashmidevi.V pertaining to survey No.156, new property No.347, Ward No.196, Kottanuru Village and it is marked as **Ex.P.9**.

(Plaintiff counsel prays time for further chief examination. Time granted).

(Computerized to my dictation in the open court as deposed by the witness.)

**R. O. I. & A. C.,**

**(MAMTAZ)**
**IX Addl. C.C. & S.J., Bengaluru.**

ದಿ:14-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟಿಸವಾಲು : ಪ್ರತಿವಾದಿ ಪರ ಶ್ರೀ. ಎಂ.ವಿ.ಎಸ್ ವಕೀಲರಿಂದ :

1. ನಾನು 10 ನೇ ತರಗತಿವರೆಗೆ ಓದಿದ್ದೇನೆ. ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿದೆ.

2. ಪ್ರಸ್ತುತ ನಾನು ಕಾಶಿನಗರ ವೃತ್ತ, ಆಶ್ರಮ ರಸ್ತೆ, ಕನಕಪುರ ಮುಖ್ಯ ರಸ್ತೆಯಲ್ಲಿ ವಾಸ ಮಾಡುತ್ತಿದ್ದೇನೆ. ನಂ.6, 3 ನೇ ಅಡ್ಡ ರಸ್ತೆ, ಶಾಂತಿ ಇಂಡಸ್ಟ್ರೀಸ್ ನ ಹಿಂಭಾಗ, ಅರುಣೋದಯ ಅಪಾರ್ಟ್ ಮೆಂಟಿನ ಹಿಂಭಾಗ, ಕೆ.ಎಸ್.ಲೇಔಟಿನಲ್ಲಿ ಎಷ್ಟು ವರ್ಷದಿಂದ ವಾಸವಾಗಿದ್ದೀರೀ ಎಂದರೆ ಸಾಕ್ಷಿ ಈಗ್ಗೆ 2 ತಿಂಗಳಿಂದ ನಾನು ಅಲ್ಲಿ ವಾಸವಾಗಿದ್ದೇನೆ ಎಂದು ನುಡಿಯುತ್ತಾರೆ. ನಾನು ಮೊದಲು ಹೇಳಿದ ವಿಳಾಸ ಹಾಗೂ ಆ ಬಳಿಕ ಹೇಳಿದ ವಿಳಾಸ ಎರಡೂ ಒಂದೇ.

3. ಸಾಕ್ಷಿಗೆ ಈಗ ಒಂದು ದಾಖಲೆ ತೋರಿಸಿ ಅವರೇ ನೀಡಿದ ದೂರಿನ ಪ್ರಕಾರ ದಿನಾಂಕ 25.10.2025 ರಲ್ಲೇ ಮೇಲೆ ಹೇಳಿದ ವಿಳಾಸದಲ್ಲಿ ವಾಸವಾಗಿದ್ದೀರಿ ಎಂದರೆ ಸಾಕ್ಷಿ ನಿರಾಕರಿಸುತ್ತಾರೆ. ಈಗ ನಾನು ನೋಡುತ್ತಿರುವ ದೂರು ನಾನೇ ಬರೆದುದ್ದು ಎಂದರೆ ಸರಿ. ಸಾಕ್ಷಿಗೆ ಈಗ ಇನ್ನೊಂದು ದಾಖಲೆಯನ್ನು ತೋರಿಸಿ ಸದರಿ ದೂರಿನ ಆಧಾರದಲ್ಲಿ ಪೊಲೀಸರು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಹಿಂಬರಹ ನೀಡಿದ್ದಾರೆ ಎಂದರೆ ಸರಿ. ಸದರಿ ದೂರನ್ನು ನಿ.ಡಿ.1 ಎಂದು ಮತ್ತು ಪೊಲೀಸರು ನೀಡಿದ ಹಿಂಬರಹವನ್ನು ನಿ.ಡಿ.2 ಎಂದು ಗುರುತಿಸಲಾಯಿತು. ನಾನು ಪ್ರಮಾಣ ಪತ್ರದಲ್ಲಿ ತೋರಿಸಿದ ವಿಳಾಸದಲ್ಲಿ ವಾಸ್ತವ್ಯ ಇದ್ದಿರಲಿಲ್ಲ ಮತ್ತು ಈ ದಾವೆಗಾಗಿ ಸದರಿ ವಿಳಾಸವನ್ನು ತೋರಿಸಿದ್ದೇನೆ ಎಂದರೆ ಸರಿಯಲ್ಲ.

5. ನನ್ನ ಮಾವ ವೆಂಕಟರಮಣಯ್ಯ ಅವರ ತಂದೆಯ ಹೆಸರು ಮಾರಪ್ಪ. ಮಾರಪ್ಪ ಅವರಿಗೆ ಮೂರು ಜನ ಮಕ್ಕಳು. ವೆಂಕಟಪ್ಪ, ವೆಂಕಟರಮಣಯ್ಯ ಮತ್ತು ಮಾರಪ್ಪನ ಮಗಳ ಹೆಸರು ನನಗೆ ನೆನಪಿಲ್ಲ.

6. ನನಗೆ 1999 ರಲ್ಲಿ ಮದುವೆಯಾಗಿತ್ತು. ನನ್ನ ಮದುವೆಯಾಗುವ ಸಂದರ್ಭದಲ್ಲಿ ವೆಂಕಟರಮಣಯ್ಯ ಅವರು ಪೀಣ್ಯದಲ್ಲಿ ವಾಸವಾಗಿದ್ದರು. ಪೀಣ್ಯದಲ್ಲಿ ಇದ್ದ ಮನೆ ಅವರ ಕ್ವಾಟ್ರಸ್ ಆಗಿತ್ತು. ವೆಂಕಟರಮಣಯ್ಯ ಅವರು ಗೊರಗುಂಟೆಪಾಳ್ಯದ ಡಾ| ನಾರಯಣ ಎಂಬುವವರ ಗೆಸ್ಟ್ ಹೌಸಿನಲ್ಲಿ ವಾಸವಾಗಿದ್ದರು ಎಂದರೆ ಸುಳ್ಳು. ಸದರಿ ಗೆಸ್ಟ್ ಹೌಸಿನಲ್ಲಿ ವಾಸವಾಗಿದ್ದು ಲಕ್ಷ್ಮಮ್ಮ ಅವರು ತೋಟದ ಕೆಲಸ ಹಾಗೂ ದನ ಹಾಗೂ ಕರುಗಳನ್ನು ಇಟ್ಟುಕೊಂಡು ಹಾಲು ವ್ಯಾಪಾರ ಮಾಡುತ್ತಿದ್ದರು ಎಂದರೆ ಸುಳ್ಳು. 1 ನೇ ಪ್ರತಿವಾದಿ ಹಾಲು ಮಾರಿದ ಹಣ ಮತ್ತು ಅವರ ಕೂಲಿ ಹಣವನ್ನು ಸೇರಿಸಿ ದಿನಾಂಕ 29.01.2003 ರಲ್ಲಿ ಐಟಂ ನಂ.3 ರ ಜಾಗವನ್ನು ಖರೀದಿಸಿದ್ದರು ಎಂದರೆ ಸುಳ್ಳು.

7. ನನ್ನ ಮಾವ ಸರ್ಕಾರಿ ಕೆಲಸದಲ್ಲಿದ್ದರು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೇನೆ. ನನ್ನ ಮಾವ ಸರ್ಕಾರಿ ಕೆಲಸದಲ್ಲಿದ್ದರು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ.

8. ನಿ.ಪಿ.5 ರ ಕ್ರಯ ಪತ್ರದಲ್ಲಿ ನನ್ನ ಮಾವ ಸದರಿ ಆಸ್ತಿಯನ್ನು ಖರೀದಿಸಲು ಹಣ ನೀಡಿದ್ದಾರೆ ಎಂಬ ಬಗ್ಗೆ ಉಲ್ಲೇಖ ಇದೆಯಾ ಎಂದರೆ ಇದೆ ಎಂದು ಸಾಕ್ಷಿ ನುಡಿಯುತ್ತಾರೆ. ನಿ.ಪಿ.5 ರ ದಾಖಲೆಯನ್ನು ಸಾಕ್ಷಿಗೆ ತೋರಿಸಿ ಸದರಿ ದಾಖಲೆಯಲ್ಲಿ ಆ ಬಗ್ಗೆ ಉಲ್ಲೇಖ ಇದೆಯಾ ಎಂದರೆ ಸಾಕ್ಷಿ ಉಲ್ಲೇಖ ಇಲ್ಲ ಎಂದು ನುಡಿಯುತ್ತಾರೆ.

9. ಐಟಂ ನಂ.3 ರ ಜಾಗಗಳನ್ನು 1 ನೇ ಪ್ರತಿವಾದಿ ಖರೀದಿಸಿದ ನಂತರ ಆಕೆ ದುಡಿದ ಹಣದಿಂದ ಅದೇ ಆಸ್ತಿಯಲ್ಲಿ 8 ಮನೆಗಳನ್ನು ಕಟ್ಟಿಕೊಂಡಿದ್ದರು ಎಂದರೆ ಸುಳ್ಳು. ಸದರಿ 8 ಮನೆಗಳಲ್ಲಿ ಒಂದು ಮನೆಯಲ್ಲಿ 1 ನೇ ಪ್ರತಿವಾದಿ ವಾಸ್ತವ್ಯವಿದ್ದು ಉಳಿದ 7 ಮನೆಗಳನ್ನು ಬಾಡಿಗೆಗೆ ಕೊಟ್ಟಿದ್ದಾರೆ ಎಂದರೆ ಸಾಕ್ಷಿ 9 ಮನೆಗಳನ್ನು ಬಾಡಿಗೆಗೆ ಕೊಟ್ಟು 1 ನೇ ಪ್ರತಿವಾದಿ ಅಂಜನಾಪುರ ಲೇಔಟಿನಲ್ಲಿ ವಾಸ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. 7 ಮನೆಗಳ ಬಾಡಿಗೆ ಹಣವನ್ನು ಕೂಡಿಟ್ಟು ಮತ್ತು 1 ನೇ ಪ್ರತಿವಾದಿಯ ಸ್ವಂತ ಸಂಪಾದನೆಯಿಂದ ಐಟಂ ನಂ.1 ರ ಜಾಗವನ್ನು 1 ನೇ ಪ್ರತಿವಾದಿ ಖರೀದಿಸಿದ್ದರು ಎಂದರೆ ಸುಳ್ಳು. ಐಟಂ ನಂ.1 ರ ಜಾಗವನ್ನು ಖರೀದಿಸಿದ ನಂತರ ಅದರಲ್ಲಿ 1 ನೇ ಪ್ರತಿವಾದಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ ಎಂದರೆ ಸರಿ.

10. ಆನೆಕಲ್ಲು ಜಾಗವನ್ನು ವೆಂಕಟರಮಣಪ್ಪ ಹಾಗೂ ಅವರ ಸಹೋದರರರು ಮಾರಾಟ ಮಾಡಿದ ಸಂದರ್ಭದಲ್ಲಿ ವೆಂಕಟರಮಣಪ್ಪ ಅವರಿಗೆ ಎಷ್ಟು ಹಣ ಬಂದಿದೆ ಎಂದು ತೋರಿಸಿದ್ದಾರಾ ಎಂದರೆ ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

11. ಐಟಂ ನಂ.1 ರ ಜಾಗವನ್ನು 1 ನೇ ಪ್ರತಿವಾದಿ ಖರೀದಿಸುವ ಸಂದರ್ಭದಲ್ಲಿ ಸದರಿ ಕ್ರಯ ಪತ್ರದಲ್ಲಿ ವೆಂಕಟರಮಣಪ್ಪ ಅವರು ಹಣ ಪಾವತಿ ಮಾಡಿದ ಬಗ್ಗೆ ಉಲ್ಲೇಖ ಇದೆಯಾ ಎಂದರೆ ಉಲ್ಲೇಖ ಇಲ್ಲ ಎಂದು ನುಡಿಯುತ್ತಾರೆ. ವೆಂಕಟರಮಣಪ್ಪ ಅವರು ಅವರ ಬಳಿ ಹಣ ಇದ್ದಿದ್ದರೆ ಅವರ ಹೆಸರಿನಲ್ಲಿಯೇ ಆಸ್ತಿಗಳನ್ನು ಖರೀದಿಸಲು ತೊಂದರೆ ಇದ್ದಿರಲಿಲ್ಲ ಎಂದರೆ ಸಾಕ್ಷಿ ನನ್ನ ಮಾವ 1 ನೇ ಪ್ರತಿವಾದಿಯ ಹೆಸರಿಗೆ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಐಟಂ ನಂ.1 ಹಾಗೂ 3 ರ ಜಾಗಗಳು 1 ನೇ ಪ್ರತಿವಾದಿ ಸ್ವಂತ ಸಂಪಾದನೆಯಿಂದ ಖರೀದಿಸಿ ಅದು ಅವರ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ,

(ಪ್ರಶಾಂತಿ.ಜಿ)
9ನೇ ಅಪರ ನಗರ ಸಿವಿಲ್ ಮತ್ತು ಸತ್ರ

O.S.2537/2023
PW1

**ನ್ಯಾಯಾಧೀಶರು, ಬೆಂಗಳೂರು.**